ಶ್ರೀ ಜೆ. ಎಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).—

(ಅ) ಸರ್ಕಾರೀ ವಲಯದಲ್ಲಿ ಇಲ್ಲ. ಒಂದು ಘಟಕವನ್ನು ೧೯೮೨ರಲ್ಲಿ ಸ್ಥಾಪಿಸಲಾಗಿದೆ. ೮ ಚಿಕ್ಕ ಸಿಮೆಂಟ್ ಘಟಕಗಳಿಗೆ ಪರವಾನೆಯನ್ನು ನೀಡಲಾಗಿದ್ದು ಅವು ಬೇರೆ ಬೇರೆ ಹಂತಗಳಲ್ಲಿವೆ. ಎಲ್ಲಾ ಘಟಕಗಳಿಗೂ ಮೂಲಿನ್ಯ ಮಂಡಳಿಯಿಂದ ಅನುಮತಿಯನ್ನು ಪಡೆದಿವೆ.

(ಆ) ಉಂಟಾಗಲಿಕ್ಕಿಲ್ಲ.

(ಇ) (ವಿ. ಎಸ್. ಕೆ.) ವರ್ಟಿಕಲ್ ಷಾಫ್ಟ್ ಕ್ಲಿನ್ ತಂತ್ರಜ್ಞಾನವನ್ನು ಅಳವಡಿಸಿದೆ.

(ಈ) ಕೆಲವು ದೂರುಗಳು ಬಂದಿವೆ.

(ಉ) ಎಲ್ಲಾ ಕಂಪನಿಗಳಿಂದ ಒಂದು ಕರಾರು ಪತ್ರವನ್ನು ಪಡೆದಿದ್ದು ಏನಾದರೂ ಸುತ್ತ ಮುತ್ತಲಿನ ಬೆಳೆಗೆ ಹಾನಿಯಾದರೆ ಪರಿಹಾರ ಕೊಡುವಂತೆ ನಿಬಂಧನೆಯನ್ನು ಹಾಕಲಾಗಿದೆ. ಹಾಗೂ, ಸ್ಥಳೀಯ ಪಂಚಾಯತಿಗಳಿಗೆ ವಾರ್ಷಿಕವಾಗಿ ನಿರ್ದಿಷ್ಟವಾದ ಹಣವನ್ನು ಪರಿಹಾರ ರೂಪದಲ್ಲಿ ಕೊಡುವಂತೆಯೂ ಒಪ್ಪಿಗೆ ಪಡೆಯಲಾಗಿದೆ.

ಮಂಗಳೂರು ತೈಲ ಶುದ್ಧೀಕರಣ ಸ್ಥಾಪನೆ

೧೨೨ (೩೪೩) ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

(ಅ) ಮಂಗಳೂರು ತೈಲ ಶುದ್ಧೀಕರಣಗಾರ ಯಾವ ಯೋಜನೆಯಡಿಯಲ್ಲಿ ಸ್ಥಾಪಿತವಾಗಲಿದೆ?

(ಆ) ಇದಕ್ಕೆ ತಗಲುವ ಅಂದಾಜು ಖರ್ಚು ಎಷ್ಟು?

(ಇ) ಇದಕ್ಕೆ ಬೇಕಾದ ವಿದ್ಯುತ್, ನೀರು ಮೊದಲಾದ ಮೂಲಭೂತ ಅವಶ್ಯಕತೆಗಳನ್ನು ರಾಜ್ಯ ಸರ್ಕಾರದವರು ಪೂರೈಸುವರೆ, ಹಾಗೂ ಇದಕ್ಕಾಗಿ ಪಶಪಡಿಸಿಕೊಂಡಿರುವ ಭೂಮಿಯೆಷ್ಟು ಮತ್ತು ಇದರ ಪೆಚ್ಚವೆಷ್ಟು?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).—

(ಅ) ಒನೇ ಯೋಜನೆಯು ಅವಧಿಯಲ್ಲಿ ಆಗಬಹುದು.

(ಆ) ರೂ ೧,೨೦೦ ಕೋಟಿ (ಅಂದಾಜು ಖರ್ಚು).

(ಇ) ನೀರು ಮತ್ತು ವಿದ್ಯುತ್ ಪೂರೈಕೆ ಸೇರಿ ಎಲ್ಲಾ ತರಹದ ಸಹಾಯವನ್ನು ಸರ್ಕಾರದಿಂದ ನೀಡಲಾಗುವುದು.

ಒಟ್ಟು ೨,೧೯೮ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಅದರ ಪೈಕಿ ೩೯೮ ಎಕರೆ ಭೂಮಿಯನ್ನು ಈಗಾಗಲೇ ಸ್ವಾಧೀನಪಡಿಸಿಕೊಳ್ಳಲಾಗಿದ್ದು ಅದಕ್ಕೆ ೮೦ ಲಕ್ಷ ರೂಪಾಯಿ ವೆಚ್ಚ ಆಗಿದೆ. ಮಿಕ್ಕ ೧೮೦೦ ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಸುಮಾರು ೫ ಕೋಟಿ ರೂಪಾಯಿ ವೆಚ್ಚ ಆಗಬಹುದು.

ದಾವಣಗೆರೆಯಲ್ಲಿ ರಂಗ ಮಂದಿರ ಕಟ್ಟಿಸುವುದು

೧೨೩ (೫೩೪) ಶ್ರೀ ಪಂಪಾಪತಿ (ದಾವಣಗೆರೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

(ಅ) ದಾವಣಗೆರೆಯಲ್ಲಿ ಕಟ್ಟಬೇಕಿರುವ ರಂಗಮಂದಿರಕ್ಕೆ ದಾವಣಗೆರೆ ನಗರ ಸಭೆಯವರು ಸರಕಾರದಿಂದ ಧನ ಸಹಾಯ ಕೇಳಿದ್ದಾರೆಯೆ?

(ಆ) ಹಾಗಿದ್ದಲ್ಲಿ ಎಷ್ಟು ಹಣವನ್ನು ಮಂಜೂರು ಮಾಡಲಾಗುವುದು?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

ಕೃಷ್ಣರಾಜಪೇಟೆ ಪಟ್ಟಣಕ್ಕೆ ಹೇಮಾವತಿಯಿಂದ ನೀರು ಸರಬರಾಜು ಮಾಡುವ ಬಗ್ಗೆ

೧೨೪ (೬೫೫) ಶ್ರೀ ಕೃಷ್ಣ (ಕೃಷ್ಣರಾಜಪೇಟೆ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ನಗರಾಭಿವೃದ್ಧಿ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

(ಅ) ಕೃಷ್ಣರಾಜ ಪೇಟೆ ಪಟ್ಟಣವು ತೀವ್ರವಾದ ಕುಡಿಯುವ ನೀರಿನ ಕೊರತೆಯನ್ನು ಎದುರಿಸುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

(ಆ) ಕೃಷ್ಣರಾಜ ಪೇಟೆ ಪಟ್ಟಣಕ್ಕೆ ಹೇಮಾವತಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆ ಏನಾದರೂ ಸರಕಾರದವರ ಮುಂದೆ ಇದೆಯೆ ?

(ಇ) ಹಾಗಿದ್ದಲ್ಲಿ ಯೋಜನೆಯ ಅಂದಾಜು ವೆಚ್ಚ ಹಾಗೂ ಯಾವಾಗ ಪ್ರಾರಂಭ ಮಾಡ ಲಾಗುವುದು ?

(ಈ) ಅಂತಹ ಯೋಜನೆ ಇಲ್ಲದಿದ್ದಲ್ಲಿ ಈ ಬಗ್ಗೆ ಸರಕಾರದವರು ಈ ಯೋಜನೆಯನ್ನು ಕಾರ್ಯಗತಗೊಳಿಸಲು ಪ್ರಯತ್ನಿಸುವರೆ ?

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ನಗರಾಭಿವೃದ್ಧಿ ಸಚಿವರು).—

(ಅ) ಬಂದಿದೆ.

(ಆ) ಇದೆ.

(ಇ) ಅಂದಾಜು ವೆಚ್ಚ ೫೧.೦೦ ಲಕ್ಷ ರೂ. ಗಳು (೧೯೮೦-೮೧) ಆಡಳಿತಾತ್ಮಕ ಮಂಜೂ ರಾತಿ ನೀಡಿದ ನಂತರ ಪ್ರಾರಂಭಿಸಲಾಗುವುದು.

(ಈ) ಉದ್ಭವಿಸುವುದಿಲ್ಲ.

ಬೆಳ್ತಂಗಡಿಯಲ್ಲಿ (ತಾಲ್ಲೂಕಿಗೆ) ಬಸ್ ನಿಲ್ದಾಣದ ನಿರ್ಮಾಣ

೧೨೫ (೩೮೪) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

(ಅ) ಬೆಳ್ತಂಗಡಿಗೆ ಬಸ್ಸು ನಿಲ್ದಾಣ ಮಂಜೂರಾಗಿದ್ದರೂ, ನಿರ್ಮಾಣ ಕಾರ್ಯವನ್ನು ಪ್ರಾರಂಭಿಸದಿರಲು ಇರುವ ಅಡಚಣೆಗಳೇನು. ಮತ್ತು ಯಾವಾಗ ಕೆಲಸವನ್ನು ಪ್ರಾರಂಭಿಸಲಾಗು ವುದು ?

(ಆ) ತಾಲ್ಲೂಕು ಕೇಂದ್ರವಾದ ಬೆಳ್ತಂಗಡಿಯಿಂದ ಬೆಂಗಳೂರಿಗೆ ಸುಖಾಸೀನ ಬಸ್ಸುಗಳಿರ ದಿರಲು ಕಾರಣವೇನು ? ಈ ವ್ಯವಸ್ಥೆಯನ್ನು ಯಾವಾಗ ಮಾಡಲಾಗುವುದು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ. (ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬೆಳ್ತಂಗಡಿಯಲ್ಲಿ ನವೀನ ರೀತಿಯ ಬಸ್ ನಿಲ್ದಾಣವನ್ನು ನಿರ್ಮಿಸಲು ಸೂಕ್ತ ನಿವೇಶನವನ್ನು ಹುಡುಕುತ್ತಿದೆ.